**<u>ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ. ನ್ಯಾಯಾಲಯ, ಕುಣಿಗಲ್</u>**

**ಸಿ.ಸಿ. ನಂ.1035/2019**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ರಂಗಸ್ವಾಮಿ | |
| ಗಂಡನ ಹೆಸರು | : | ಭೈರಶೆಟ್ಟಿ | |
| ವಯಸ್ಸು | : | 30 ವರ್ಷ | |
| ಉದ್ಯೋಗ | : | ಚಾಲಕ | |
| ವಾಸಸ್ಥಳ | : | ಹುಲಿಯೂರು ದುರ್ಗ, ಕುಣಿಗಲ್ ತಾಲ್ಲೂಕು. | |

**<u>ಸಾಕ್ಷಿಗೆ ದಿನಾಂಕಃ 29.09.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>**

ದಿನಾಂಕ 23.07.2019 ರಂದು ನಾನು ಬೆಂಗಳೂರು ರಸ್ತೆಯಲ್ಲಿರುವ steel ಅಂಗಡಿ ಬಳಿ ನಾನು ಮತ್ತು ನನ್ನ ಮಾವನಾದ ಚಿಕ್ಕಣ್ಣ ಹೂವು ವ್ಯಾಪಾರ ಮಾಡುತ್ತಿದ್ದೆವು. ಆಗ ಸರ್ಕಾರಿ ಬಸ್ ಬಂದಾಗ, 1ನೇ ಆರೋಪಿ ಮಗ ಬಸ್ಸನ್ನು ಬೆಳಿಗ್ಗೆ 7.30 ರ ಸಮಯದಲ್ಲಿ ಅಡ್ಡಹಾಕಿದರು. ಆಗ ಸರ್ಕಾರಿ ಬಸ್ ನ ಚಾಲಕ ಹಾರ್ನ್ ಮಾಡಿ ಸೈಡ್ ಗೆ ಹೋಗಲು ಎಂದು ಹೇಳಿದಾಗ, 1ನೇ ಆರೋಪಿಯ ಮಗ ಸೈಡಿಗೆ ಹೋಗಲಿಲ್ಲ, ಆಗ ಸರ್ಕಾರಿ ಬಸ್ ಚಾಲಕನಾದ ಚಾಸಾ.1 ರವರು ಕೆಳಗೆ ಇಳಿದು, ಏಕೆ ಬಸ್ ಅಡ್ಡ ಹಾಕಿದ್ದೀಯಾ ಎಂದು ಕೇಳಿದಾಗ , 1ನೇ ಆರೋಪಿ ಮತ್ತು ಆತನ ಮಗ ಚಾಸಾ.1 ರವರಿಗೆ ಹೊಲಸು ಮಾತನಾಡಿ, 1ನೇ ಆರೋಪಿ, ಆತನ ಮಗ ಮತ್ತಿಬ್ಬರು ಚಾಸಾ.1 ರವರಿಗೆ ಕೊರಳ ಪಟ್ಟಿ ಹಿಡಿದು, ಮುಖಕ್ಕೆ, ಕೈಗೆ, ತೊಡೆಗೆ ಹೊಡೆದರು. ಆಗ ನಾನು ಮತ್ತು ನನ್ನ ಮಾವ ಹೋಗಿ ಜಗಳ ಬಿಡಿಸಿದೆವು.

ಅಷ್ಟರಲ್ಲಿ 1ನೇ ಆರೋಪಿ ಮತ್ತು ಆತನ ಮಗನನ್ನು ಬಿಟ್ಟು ಉಳಿದಿಬ್ಬರು ಹೊರಟು ಹೋದರು, ನಂತರ 1ನೇ ಆರೋಪಿ ಮತ್ತು ಆತನ ಮಗನನ್ನು ಅದೇ ಬಸ್ಸಿ ನಲ್ಲಿ ಠಾಣೆಗೆ ಕಳುಹಿಸಿದೆವು. ಚಾಸಾ.1 ರವರ ಬಸ್ ಸಂ.ಕೆಎ-06ಎಫ್-964 ಆಗಿತ್ತು. ಚಾಸಾ.1 ರವರನ್ನು ಹೊಡೆದವರನ್ನು ನಾನು ಗುರುತಿಸುತ್ತೇನೆ. ಚಾಸಾ.1 ರವರನ್ನು ಹೊಡೆದವರಲ್ಲಿ 1ನೇ ಆರೋಪಿಯ ಮಗ ನ್ಯಾಯಾಲಯದಲ್ಲಿದ್ದು, 1ನೇ ಆರೋಪಿ ಇರುವುದಿಲ್ಲ( 1 ಮತ್ತು 3ನೇ ಆರೋಪಿತರು ಗೈರು ಹಾಜರಿದ್ದು, ಆರೋಪಿತರ ಗುರುತಿಸುವಿಕೆಯಲ್ಲಿ ಯಾವುದೇ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ). ನಾನು ಪೊಲೀಸರಿಗೆ ಘಟನೆಯ ಕುರಿತು ಹೇಳಿಕೆ ನೀಡಿರುತ್ತೇನೆ.

**( ಈ ಹಂತದಲ್ಲಿ ಮಾನ್ಯ ಸ. ಸ. ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ನ್ಯಾಯಾಲಯದ ಅನುಮತಿಯನ್ನು ಕೋರಿರುತ್ತಾರೆ. ಅನುಮತಿ ನೀಡಲಾಯಿತು.)**

**ಪಾಟೀಸವಾಲುಃ ಮಾನ್ಯ ಎಪಿಪಿ ರವರಿಂದಃ**

ಘಟನಾ ದಿನದಂದು ನಾನು ಮತ್ತು ಚಾಸಾ.3 ರವರು Karnataka steel ಅಂಗಡಿ ಬಳಿ ಮಾತನಾಡುತ್ತಾ ನಿಂತಿದ್ದೆವು ಎಂದರೆ ಸರಿ. 1ನೇ ಆರೋಪಿ ಚಾಸಾ.1 ರವರನ್ನು ಜಾಗ ಬಿಡುವವರೆಗೆ ಕಾಯಿ, ಸೂಳೇ ಮಗನೇ, ಬೋಳಿ ಮಗನೇ ಎಂದು ಬೈದರು ಎಂದರೆ ಸರಿ. 1ನೇ ಆರೋಪಿ ಚಾಸಾ.1 ರವರಿಗೆ ಕೊರಳ ಪಟ್ಟಿ ಹಿಡಿದು ಕೈಗಳಿಂದ ಹಲ್ಲೆ ಮಾಡಿದರು ಎಂದರೆ ಸರಿ. 2 ಮತ್ತು 3ನೇ ಆರೋಪಿತರು ಚಾಸಾ.1 ರವರಿಗೆ ಹಲ್ಲೆ ಮಾಡಿ, ಅವಾಚ್ಯ ಶಬ್ದಗಳಿಂದ ಬೈದು, ಕರ್ತವ್ಯಕ್ಕೆ ಅಡ್ಡಿಪಡಿಸಿದ್ದರು ಎಂದರೆ ಸರಿ. ಆಗ ನಾನು ಮತ್ತು ಚಾಸಾ.3 ರವರು ಜಗಳ ಬಿಡಿಸಿದೆವು ಎಂದರೆ ಸರಿ.

**<u>ಪಾಟೀ ಸವಾಲುಃಆರೋಪಿ ಪರ ಶ್ರೀ.ಕೆ ಎನ್ ಎ ವಕೀಲರಿಂದಃ-</u>**

ನಾನು ಮತ್ತು ಚಾಸಾ.1 ಸಂಬಂಧಿಕರು ಎಂದರೆ ಸರಿಯಲ್ಲ. ಚಾಸಾ.1 ರವರ ಮತ್ತು ನಮ್ಮ ಮನೆ ಅಕ್ಕಪಕ್ಕದಲ್ಲಿದೆ ಎಂದರೆ ಸರಿಯಲ್ಲ. ಚಾಸಾ.1 ಮತ್ತು ನಾನು ಒಂದೇ ಊರಿನವರು ಎಂದರೆ ಸರಿ. ಚಾಸಾ.1 ರವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ನನ್ನ ತಂದೆಯ ಹೆಸರು ಭೈರಶೆಟ್ಟಿ ಎಂದರೆ ಸರಿ. ಚಾಸಾ.1 ರವರ ತಂದೆಯ ಹೆಸರು ಜಯರಾಮ ಶೆಟ್ಟಿ ಎಂದರೆ ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಚಾಸಾ.1 ರವರು ನನ್ನ ಸೋದರ ಮಾವನ ಮಗ ಎಂದರೆ ಸರಿ. ನಾನು ಚಾಸಾ.1ರವರ ಜೊತೆ ನ್ಯಾಯಾಲಯದ ಹೊರಗಡೆ ಮಾತನಾಡುತ್ತಿದ್ದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು, ತನಗೆ ನ್ಯಾಯಾಲಯದಿಂದ ಸಮನ್ಸ್ ಬಂದಿತ್ತು ಎಂದು ನುಡಿಯುತ್ತಾರೆ. ನಾನು ಚಾಸಾ.1 ರವರು ಹೇಳಿಕೊಟ್ಟಂತೆ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ನಾನು ಹೂವಿನ ವ್ಯಾಪಾರವನ್ನು 2-3 ವರ್ಷಗಳಿಂದ ಮಾಡುತ್ತಿದ್ದೇನೆ. ನಾನು ಹೂವಿನ ವ್ಯಾಪಾರ ಮಾಡಲು ಪರವಾನಗಿ ಪಡೆದಿಲ್ಲ ಮತ್ತು ಸುಂಕವನ್ನು ಕಟ್ಟಿಲ್ಲ. Karnataka steel ಅಂಗಡಿಯ ಅಕ್ಕಪಕ್ಕ plastic ಬಿಂದಿಗೆ ಅಂಗಡಿ ಇರುತ್ತದೆ. Karnataka steel ಅಂಗಡಿಯ ಬಾಗಿಲು ದಕ್ಷಿಣ ದಿಕ್ಕಿಗೆ ಇರುತ್ತದೆ. Karnataka steel ಅಂಗಡಿ ತುಮಕೂರು ರಸ್ತೆಯಲ್ಲಿರುತ್ತದೆ ಎಂದರೆ ಸರಿಯಲ್ಲ.

3. ಚಾಸಾ.3 ರವರು ಚಾಸಾ.1 ರವರ ಸೋದರ ಮಾವ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ನಾನು ಮತ್ತು ಚಾಸಾ.3 ರವರು ಹೂವು ಮಾರುತ್ತಿದ್ದ ವಿಚಾರ ಸರಿ ಇರುತ್ತದೆ.

ನಾನು ಬಟನ್ಸ್ ಹೂವು ಮಾರುತ್ತಿದ್ದೆ. ಸದರಿ ಹೂವನ್ನು ನಾವೇ ಬೆಳೆಯುತ್ತೇವೆ. ಸದರಿ ಬೆಳೆಯನ್ನು ನಮ್ಮ ಊರಿನ ಪಕ್ಕದ ಹಳೇಊರಿನಲ್ಲಿ ಬೆಳೆಯುತ್ತೇನೆ. ಸದರಿ ಜಮೀನಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಸದರಿ ಬಟನ್ಸ್ ಹೂವಿನ ಬೆಳೆ ಆಯುಧ ಪೂಜೆಯಲ್ಲಿ ಬರುತ್ತದೆ. ಆಯುಧ ಪೂಜೆ ಅಕ್ಟೋಬರ್ ತಿಂಗಳಿನಲ್ಲಿ ಆಗುತ್ತದೆ ಎಂದರೆ ಸರಿ. ಸದರಿ ದಿನದಂದು ನಾವು ನಿಂತಿದ್ದ ಸಮಯದಲ್ಲಿ ಸರ್ಕಾರಿ ಬಸ್ ಹೊರತುಪಡಿಸಿ ಬೇರೆ ಯಾವುದೇ ಬಸ್ ಬಂದಿರಲಿಲ್ಲ. ನಾವು ಹೂವು ಮಾರುತ್ತಿದ್ದ ಜಾಗದಲ್ಲಿ ಯಾವುದೇ ಬಸ್ ನಿಲ್ದಾಣ ಇಲ್ಲ. ನಾವು ನಿಂತಿದ್ದ ರಸ್ತೆ ಅಂದಾಜು 50-60 ಅಡಿ ಇರಬಹುದು. ಸದರಿ ರಸ್ತೆಯಲ್ಲಿ ಒಂದೇ ಬಾರಿಗೆ ಎರಡು ಬಸ್ಸು ಮತ್ತು ಒಂದು ಕಾರು ಹೋಗಬಹುದು ಎಂದರೆ ಸರಿ. ಸದರಿ ರಸ್ತೆಯ ನಡುವೆ ರಸ್ತೆ ವಿಭಜಕ ಇದೆ ಎಂದರೆ ಸರಿ. ಚಾಸಾ.1 ರವರ ಬಸ್ ನ ಪಕ್ಕ ಬೇರೆ ವಾಹನಗಳು ಹೋಗಲು ಜಾಗವಿತ್ತು ಎಂದರೆ ಸರಿ. ನಾನಾಗಾಗಲೀ ಅಥವಾ ಚಾಸಾ.3 ರವರಾಗಲೀ ಯಾವುದೇ ಘಟನೆ ನೋಡದೇ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಆರೋಪಿತರು ಯಾವುದೇ ಗಲಾಟೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಚಾಸಾ.1 ರವರನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಚಾಸಾ.1 ರವರಿಗೆ ಯಾವುದೇ ಹಲ್ಲೆ ಮಾಡಿರುವುದಿಲ್ಲ ಮತ್ತು ನಿಂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಘಟನೆಯಲ್ಲಿ ಚಾಸಾ.1 ರವರ ಅಂಗಿಯ ಎರಡು ಗುಂಡಿಗಳು ಕಿತ್ತುಹೋದವು. ನಾನು ಹೇಳುವ ದಿನದಂದು ನಾನು ಕುಣಿಗಲ್ ಗೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ.1 ರವರ ಕರ್ತವ್ಯಕ್ಕೆ ಆರೋಪಿತರು ಯಾವುದೇ ಅಡಚಣೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಘಟನೆ ನಡೆದ 15 ದಿನಗಳ ನಂತರ ಹೇಳಿಕೆ ನೀಡಿರುತ್ತೇನೆ. ಸದರಿ ಹೇಳಿಕೆಯಲ್ಲಿ ಪೊಲೀಸರು ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ, ಸಹಿ ಮಾಡಲು ಹೇಳಿದಕ್ಕೆ ನಾನು ಸಹಿ

ಮಾಡಿರುತ್ತೇನೆ. ಘಟನೆ ನಡೆದ ದಿನದಂದು ಆರೋಪಿತರು ಪ್ಯಾಂಟ್ ಶರ್ಟ್ ಹಾಕಿದ್ದು,ಅದರ ಬಣ್ಣ ನಾನು ಮರೆತಿದ್ದೇನೆ. ಆರೋಪಿತರನ್ನು ನಾನು ಇದೇ ಮೊದಲ ಬಾರಿ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ.1 ರವರು ಹೇಳಿಕೊಟ್ಟಂತೆ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಯಾವುದೇ ಹೂವಿನ ವ್ಯಾಪಾರ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ನನಗೆ steel ಅಂಗಡಿಯವರು ವ್ಯಾಪಾರ ಮಾಡಿಕೊಂಡು ಹೋಗಲು ಹೇಳಿದ್ದು, ಸದರಿ ಅಂಗಡಿಯ ಮತ್ತು ಮಾಲೀಕರ ಹೆಸರು ನನಗೆ ಗೊತ್ತಿಲ್ಲ. ಸದರಿ ಸ್ಥಳದಲ್ಲಿರುವ ಪುಟ್ ಪಾತ್ ಅಳತೆ ನನಗೆ ಗೊತ್ತಿಲ್ಲ. ಸದರಿ steel ಅಂಗಡಿ 2 ಮಹಡಿಗಳನ್ನು ಒಳಗೊಂಡಿದೆ. ಸದರಿ steel ಅಂಗಡಿ ಮೊದಲ ಅಂತಸ್ತಿನಲ್ಲಿದೆ. ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇಲ್ಲದಿದ್ದರೂ, ಚಾಸಾ.1 ರವರಿಗೆ ಅನುಕೂಲವಾಗಲೆಂದು ಅವರ ಮಾಹಿತಿ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

*( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

ಓ. ಹೇ.ಕೇ. ಸರಿ ಇದೆ .

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್